ನಿಂತಾಗಲೂ ಹೊಸತಾಗಿಯೇ ಶುರುಮಾಡಬೇಕು. ಪ್ರತಿ ಪಾತ್ರದಿಂದಲೂ ಹೊಸದೇನನ್ನೋ ಕಲಿತುಕೊಳ್ಳಬೇಕು' ಎಂದು ಹೆಜ್ಜೆಯಿಟ್ಟ ಹಾಗೆಯೂ ಹೊಸತಾಗುವ ನಟನಾಪ್ರಯಾಣದ ಕುರಿತು ಹೇಳುತ್ತಾರೆ.

ಕಾವ್ಯಾ ಯಾವುದೇ ಸಿನಿಮಾ ಒಪ್ಪಿಕೊಳ್ಳಬೇಕಾದರೂ ತನ್ನ ಪಾತ್ರ ಮತ್ತು ಸಿನಿಮಾದಲ್ಲಿ ಅದಕ್ಕಿರುವ ಮಹತ್ವದ ಬಗ್ಗೆ ವಿಶೇಷವಾಗಿ ಗಮನಹರಿಸುತ್ತಾರೆ. ಆದರೆ ತುಂಬ ಒಳ್ಳೆಯ ತಂಡ ಸಿಕ್ಕಾಗ ಚಿಕ್ಕ ಪಾತ್ರವಾದರೂ ಒಪ್ಪಿಕೊಳ್ಳಲು ಅವರು ಹಿಂಜರಿಯುವುದಿಲ್ಲ.

'ನಾನು ನಿರ್ದೇಶಕರ ನಟಿ. ಸಾಮಾನ್ಯವಾಗಿ ಸಿನಿಮಾ ಪಾತ್ರ ಒಪ್ಪಿಕೊಂಡ ಕೂಡಲೇ ನಿರ್ದೇಶಕರ ಬಳಿ ಪಾತ್ರದ ಬಗ್ಗೆ ಚರ್ಚಿಸುತ್ತೇನೆ. ಕೆಲವು ನಿರ್ದೇಶಕರು ರೆಫರೆನ್ಸ್‌ಗಳನ್ನು ಕೊಡುತ್ತಾರೆ. ಇನ್ನು ಕೆಲವು ನಿರ್ದೇಶಕರು ಯಾರನ್ನೂ ಫಾಲೋ ಮಾಡಬೇಡಿ. ಸ್ವಂತವಾಗಿ ಆಲೋಚಿಸಿ ನಟಿಸಿ ಎನ್ನುತ್ತಾರೆ' ಎನ್ನುವ ಕಾವ್ಯಾ, 'ರೆಫರೆನ್ಸ್ ಸಿಕ್ಕರೆ ನಟನೆಗೆ ಸಜ್ಜುಗೊಳ್ಳುವುದು ಸುಲಭವಾಗುತ್ತದೆ' ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ.

ಒಂದು ವೆಬ್‌ಸೀರೀಸ್‌ನಲ್ಲಿಯೂ ನಟಿಸಿರುವ ಅವರಿಗೆ ಭವಿಷ್ಯದಲ್ಲಿ ಓಟಿಟಿಗೆ ಸಾಕಷ್ಟು ಮಹತ್ವ ಸಿಗಲಿದೆ ಎಂಬ ನಂಬಿಕೆ ಇದೆ. 'ಕನ್ನಡದಲ್ಲಿ ಈಗಷ್ಟೇ ವೆಬ್‌ಸೀರೀಸ್‌ಗಳು ಆರಂಭಗೊಂಡಿವೆ. ಈ ವೇದಿಕೆಯಲ್ಲಿ ನಾವು ಇಡೀ ಜಗತ್ತಿನ ಜೊತೆಗೆ ಸ್ಪರ್ಧಿಸಬೇಕಾಗುತ್ತದೆ. ಆದರೆ ಒಳ್ಳೆಯ ಕಂಟೆಂಟ್ ಕೊಟ್ಟರೆ ಖಂಡಿತ ಜನರು ನೋಡುತ್ತಾರೆ' ಎನ್ನುವುದು ಅವರ ಅಂಬೋಣ.

'ರವಿ ಬೋಪಣ್ಣ' ಸಿನಿಮಾದಲ್ಲಿ ಮೂರು ಛಾಯೆಯ, ಮೂರು ವಯೋಮಾನದಲ್ಲಿ ಕಾಣಿಸಿಕೊಳ್ಳುತ್ತಿರುವ ಕಾವ್ಯಾಗೆ ರೆಟ್ರೊ ಸ್ಟೈಲ್ ಸಿನಿಮಾಗಳಲ್ಲಿ ನಟಿಸಬೇಕು ಎಂಬ ಹೆಬ್ಬಯಕೆ ಇದೆ.

ಕೊರೊನಾ ಕರಿನೆರಳು ಸರಿದ ಮೇಲೆ ತಮ್ಮ ವೃತ್ತಿಬದುಕಿನಲ್ಲಿ ಬೆಳ್ಳಿರೇಖೆ ಮೂಡಲಿದೆ ಎಂಬ ವಿಶ್ವಾಸದಲ್ಲಿರುವ ಅವರು, 'ಕಳೆದ ವರ್ಷ ಲಾಕ್‌ಡೌನ್ ಅನುಭವಿಸಿದ ನಮಗೆ ಈ ಸಲ ಅಷ್ಟೊಂದು ಕಷ್ಟವೆನಿಸಲಿಲ್ಲ. ಈ ವರ್ಷಾಂತ್ಯಕ್ಕಾದರೂ ಎಲ್ಲವೂ ಸರಿಹೋಗುತ್ತದೆ. ಚಿತ್ರರಂಗ ಮೊದಲಿನ ಹಾಗೆ ಆಗುತ್ತದೆ. ಮೊದಲಿನ ವೈಭವ ಮರಳುತ್ತದೆ. ಅದಕ್ಕಾಗಿ ಕಾಯುವ ತಾಳ್ಮೆ ನಮಗಿರಬೇಕು' ಎಂಬ ನಂಬಿಕೆಯ ದೋಣಿಯಲ್ಲಿ ಅವರು ತಮ್ಮ ಕನಸುಗಳನ್ನು ತೇಲಿಬಿಟ್ಟು ಕಾಯುತ್ತಿದ್ದಾರೆ. ■



ಮಾಡುವುದು ಅದಕ್ಕಿಂತ ಒಳ್ಳೆಯ ಕೆಲಸ. ಮತ್ತದರ ವ್ಯಾಪ್ತಿಯೂ ದೊಡ್ಡದು. ದರ್ಶನ್ ಒಂದು ಕರೆಗೆ ನಾಲ್ಕು ದಿನಗಳಲ್ಲಿ 40 ಲಕ್ಷ ರೂಪಾಯಿ ಸೇರುವುದಾದರೆ ಕನ್ನಡ ಚಿತ್ರರಂಗದ ಸ್ಟಾರ್ ನಟರೆಲ್ಲ ತಮ್ಮ ಅಭಿಮಾನಿಗಳಿಗೆ 'ಕೊರೊನಾ ಸಂಕಷ್ಟಕ್ಕೆ ಸ್ಪಂದಿಸಿ' ಎಂದು ನಿರಂತರ ಆಂದೋಲನ ಮಾಡಿದರೆ ಆಗ ಸಿಗುವ ಸಹಾಯಹಸ್ತ ಎಷ್ಟು ವ್ಯಾಪಕವಾಗಿರಬಹುದು ಯೋಚಿಸಿ. ಇದು, ತನ್ನ ಶ್ರಮದ ದುಡಿಮೆಯ ಒಂದು ಭಾಗವನ್ನು ಕೊಟ್ಟು ಸ್ಟಾರ್ ನಟರ ಸಿನಿಮಾಗಳನ್ನು ಗೆಲ್ಲಿಸಿ ಅವರಿಗೆ ಕೋಟಿ ಕೋಟಿ ರೂಪಾಯಿಗಳ ಮಾರುಕಟ್ಟೆ ಸೃಷ್ಟಿಸಿದ ಜನರಿಗೆ ಅವರು ಜನರ ಕೈಯಿಂದಲೇ ಸಲ್ಲಿಸುವ ಕೃತಜ್ಞತೆಯ ಒಳ್ಳೆಯ ಮಾದರಿಯೂ ಆಗಬಲ್ಲದು. ಜನರಿಂದ ಗಳಿಸಿಕೊಂಡ ಜನಪ್ರಿಯತೆಯನ್ನು ಜನರ ನೆರವಿಗೆ ಬಳಸಿಕೊಳ್ಳುವುದು ಇಂಥ ಸಂಕಷ್ಟದ ಸಂದರ್ಭದಲ್ಲಿ ನಟರ ಕರ್ತವ್ಯವೂ ಹೌದಲ್ಲವೇ?

ಇದು ಸಾಧ್ಯವಾಗಬೇಕಾದರೆ ಸ್ಟಾರ್ ನಟರೆಲ್ಲ ಒಂದುವೇದಿಕೆಗೆ ಬರಬೇಕು. ತಮ್ಮ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಸಮೂಹ ಸ್ವರದಲ್ಲಿ ಜನರ ಜೊತೆಗೆ ಮಾತಾಡಬೇಕು. ಇದು ಸಾಧ್ಯವಾಗುವುದು ಯಾವಾಗ? ಕೊರೊನಾದ ಇಂಥ ದಾರುಣ ಸ್ಥಿತಿಯಲ್ಲೂ ಅವರ ಮನಸ್ಸನ್ನು ಕರಗದಿದ್ದರೆ ಅವರನ್ನು 'ಹೀರೊ'ಗಳು ಎಂದು ಒಪ್ಪಿಕೊಳ್ಳುವುದು ಹೇಗೆ? ■